ಎ) ವಿಷಯ: ಜಯಲಕ್ಷ್ಮಿ ಶಿಶುವಿಹಾರ, ಕೆ.ಆರ್. ಮೊಹಲ್ಲ, ಮೈಸೂರು, ಇವರಿಗೆ ಕೊಟ್ಟಿದ್ದ ಮುನಿಸಿಪಲ್ ಜಾಗವನ್ನು ಲೀಸ್ ಆಧಾರದ ಮೇಲೆ ಮುಂದುವರೆಸುವ ಬಗ್ಗೆ:

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ): ಮಾನ್ಯ ಅಧ್ಯಕ್ಷರೆ, ಮಂತ್ರಿಗಳಲ್ಲಿ ನಾನು ನಿವೇದನೆ ಮಾಡಿಕೊಳ್ಳುತ್ತೇನೆ. ನಾನು ಪ್ರಸ್ತಾಪಿಸಿದೆ, ಅವರು ಉತ್ತರ ಕಳುಹಿಸಿ ಬಿಟ್ಟಿದ್ದಾರೆ. ಜಯಲಕ್ಷ್ಮಿ ಶಿಶುವಿಹಾರ, ಕೆ.ಆರ್. ಮೊಹಲ್ಲ, ಮೈಸೂರಿನಲ್ಲಿ ಒಂದು ಕನ್ನಡ ಪ್ರಾಥಮಿಕ ಶಾಲೆ ಇದೆ. ಸರ್ಕಾರಿ ಏಡೆಡ್ ಶಾಲೆ, ಬರಿ ಬಡವರ ಮಕ್ಕಳು ಹೋಗುತ್ತಾರೆ. ಮುನಿಸಿಪಲ್ ಜಾಗ ಲೀಸ್ ಮೇಲೆ ಅವರಿಗೆ ಕೊಟ್ಟಿದ್ದರು. ಲೀಸ್ ಪಿರಿಯೆಡ್ ಆಯಿತು, ಅರು ವರ್ಷಗಳಿಂದ ಆ ಕಡತ ಹಾಗೆಯೇ ಇಟ್ಟುಕೊಂಡಿದ್ದರು. ಆಮೇಲೆ ಅದನ್ನು ಅನಧಿಕೃತ ಎಂದು ಮಾಡಿದರು. ನಂತರ ಲೀಸ್ extend ಮಾಡಿದರು. ಏನು ಮಾಡಿದ್ದಾರೆ, ಅವರು ಅಮೌಂಟ್ ಜಾಸ್ತಿ ಕೇಳುತ್ತಿದ್ದಾರೆ. ಅವರೇನು ಡೊನೇಷನ್ ತೆಗೆದುಕೊಳ್ಳುವುದಿಲ್ಲ. ಏಡೆಡ್ ಕನ್ನಡ ಸ್ಕೂಲ್‌ಗೆ ಯಾರು ಡೊನೇಷನ್ ಕೊಡುತ್ತಾರೆ, ಆದುದರಿಂದ ಅವರಿಗೆ ಈ ಮೊದಲು ಇದ್ದಂಥ ಮಿನಿಮಮ್ ಅಮೌಂಟ್‌ಗೆ ಲೀಸ್ ಕಂಟಿನ್ಯೂ ಮಾಡಿ, ಪಾಪ ಅಲ್ಲಿ ಬಡವರ ಮಕ್ಕಳು, ಕಾರ್ಮಿಕ ಮಕ್ಕಳು, ಇವರಿಗೆ ಅನುಕೂಲವಾಗುತ್ತದೆ. ಇದು HUD ಗೆ ಬರುತ್ತದೆ.

ಶ್ರೀ ಬಸವರಾಜ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಸದಸ್ಯರೇನು ಹೇಳಿದ್ದಾರೆ, ಹಣ ಮೊದಲು ಏನು ಇತ್ತು ಅಷ್ಟೇ ತೆಗೆದುಕೊಂಡು ಯಥಾಸ್ಥಿತಿ ಮುಂದುವರಿಸಿ ಅವರಿಗೆ ಅಲ್ಲಿಯೇ ಕಂಟಿನ್ಯೂ ಮಾಡುವಂಥ ವ್ಯವಸ್ಥೆ ಮಾಡಬೇಕೆಂದು ನಿರ್ದೇಶನ ಕೊಡುತ್ತೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಬಹಳ ಧನ್ಯವಾದಗಳು.

ಅಧ್ಯಕ್ಷರು: ಈಗ ಶೂನ್ಯವೇಳೆಯಲ್ಲಿ ಉಳಿದಿರುವುದನ್ನು ನಾಳೆ ತೆಗೆದುಕೊಳ್ಳೋಣ. ಈಗ ವಿತ್ತೀಯ ಕಾರ್ಯಕಲಾಪಗಳು.

(ಐ) Sub: Presentation of Medium Term fiscal plan along in the Budget.

ಶ್ರೀ ಆರ್.ವಿ. ದೇಶಪಾಂಡೆ: ನಾನು ಏನು ಹೇಳುತ್ತೇನೆಂದರೆ .....

ಅಧ್ಯಕ್ಷರು: ಈಗ ಒಬ್ಬೊಬ್ಬರಿಗೆ ಒಂದೊಂದು ದಿವಸ ಕೊಡುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ: ನಾನು ಏನು ಹೇಳುತ್ತೇನೆಂದರೆ, ನಾನು ಮೂಲತಃ ಬಹಳ important Constitutional issue ರೈಸ್ ಮಾಡುತ್ತಿದ್ದೇನೆ. ಹೀಗಾಗಿ ನನಗೆ

ಹತ್ತು ನಿಮಿಷ ಟೈಂ ಕೊಡಿ. ಮಾನ್ಯ ಉಪ ಮುಖ್ಯಮಂತ್ರಿಗಳು ಅದಕ್ಕೆ ಸರಿಯಾಗಿ ಉತ್ತರ ಕೊಟ್ಟರೆ, ನಾನು ಕುಳಿತುಕೊಳ್ಳುತ್ತೇನೆ, ಬೇರೆಯವರು ಚರ್ಚೆ ಮಾಡಲಿ ನಾನು ಪುನಃ ಚರ್ಚೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಾನು ಮಾತನಾಡಬೇಕಿತ್ತು.

ಅಧ್ಯಕ್ಷರು: ಅವರು ಎಲ್ಲಿಗೆ ಹೋಗಬೇಕಂತೆ.

ಶ್ರೀ ಆರ್.ವಿ. ದೇಶಪಾಂಡೆ: ನಾನು ರೈಸ್ ಮಾಡುತ್ತೇನೆ. ನಂತರ ಚರ್ಚೆ ಮಾಡಿ.

ಅಧ್ಯಕ್ಷರು: ಇಲ್ಲಿ ಒಂದು ಮಾತು ಹೇಳುವುದು ಏನೆಂದರೆ, ಯಾರು ಅರ್ಧ ಗಂಟೆ ಕಾಲದ ಮೇಲೆ ಮಾತನಾಡಲಿಕ್ಕೆ ದಯಮಾಡಿ ಅವಕಾಶ ತೆಗೆದುಕೊಳ್ಳುವುದು ಬೇಡ. ಹೊಸ ಸದಸ್ಯರು ಸೂಚನೆ ಕೊಟ್ಟಿದ್ದಾರೆ, ಅವರಿಗೆ ಅವಕಾಶ ಕೊಡಲಿಕ್ಕೆ ಆಗುತ್ತಿಲ್ಲ. ನಿನ್ನೆ ಮೊನ್ನೆ ಅವರು ಮಾತನಾಡಲಿಲ್ಲ, ಸೋಮವಾರ, ಮಂಗಳವಾರ, ಮಾತನಾಡುತ್ತೇನೆಂದರು. ದಯಮಾಡಿ ಆದಷ್ಟು ಬೇಗ ಮುಗಿಸಿ.

ಶ್ರೀ ಆರ್.ವಿ. ದೇಶಪಾಂಡೆ: ತಾವು ಉಪಮುಖ್ಯಮಂತ್ರಿಗಳನ್ನು ತಕ್ಷಣ ಕರೆಸಬೇಕು.

ಅಧ್ಯಕ್ಷರು:– ಚೀಫ್ ವಿಪ್ ರವರೇ ನೋಡಿ ಅವರನ್ನುಬೇಗ ಕರೆಸಿರಿ.

ಶ್ರೀ ಆರ್.ವಿ. ದೇಶಪಾಂಡೆ: ಏಕೆಂದರೆ, ಸಂವಿಧಾನದ ಉಲ್ಲಂಘನೆಯಾಗಿದೆ. ನಾನು ತಿಳಿದುಕೊಂಡಿದ್ದೆ, ಬಜೆಟ್ ಪ್ರೆಜೆಂಟ್ ಮಾಡುವಾಗ ಕೆಲವು ವಿಚಾರದಲ್ಲಿ ಕಂಪ್ಲೈ ಮಾಡಿರಬಹುದೆಂದು ನನ್ನ ಅನಿಸಿಕೆ. ಆದರೆ ನಿನ್ನೆ ನಾನು ಬಜೆಟ್ ಬಗ್ಗೆ ಮಾತನಾಡಬೇಕೆಂದು ತಯಾರು ಮಾಡಿಕೊಳ್ಳುವಾಗ ಕೆಲವು ಗಂಭೀರವಾದ ವಿಚಾರಗಳು ನನ್ನ ಗಮನಕ್ಕೆ ಬಂದಿವೆ. ಮುಖ್ಯವಾಗಿ ಕಳೆದ ಬಾರಿ ಯಾವಾಗ ಬಜೆಟ್ ಮಂಡನೆಯಾಯಿತು ಆಗ ನಾನು ಉಪ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಚಾರ ತಂದಿದ್ದೆ. ಸಂವಿಧಾನದ ಆರ್ಟಿಕಲ್ 202 ಪ್ರಕಾರ, "The Government shall in respect of every Financial year cause to be laid before the House of Houses of Legislature of the State, a statement of the estimated receipts and expenditure..." ಕೊಡಬೇಕೆಂದು ಇದೆ. ಅದೇ ಪ್ರಕಾರ ನಾವೇ ಮಾಡಿರುವ ಕಾನೂನು. karnataka Fiscal Responsibility Act, 2002, ಈ ಕಾನೂನು ಪ್ರಕಾರ ಸೆಕ್ಷನ್ 3ರ ಪ್ರಕಾರ. it is mandatory to give the karnatka Mid Term Fiscal Plan at the time of presentation of the budget. ಈ ವಿಷಯ ನಾನು ಅಸೆಂಬ್ಲಿಯಲ್ಲಿ ರೈಸ್ ಮಾಡಿದೆ. ಆಗ ಉಪ ಮುಖ್ಯಮಂತ್ರಿಗಳು ಉತ್ತರ ಕೊಟ್ಟರು, ನಮ್ಮ ಪ್ರಾಕ್ಟೀಸ್ ಏನು ಇದೆ ಎಂದರೆ,

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರು ಬಂದ ಮೇಲೆ ನೀವು ಮಾತನಾಡಿ ಅಲ್ಲಿಯವರೆಗೆ ಇವರು ಮಾತನಾಡಲಿ.

ಶ್ರೀ ಆರ್.ವಿ. ದೇಶಪಾಂಡೆ: ಬಜೆಟ್ ಡಿಸ್‌ಕಷನ್ ಮಾಡುವುದು ತಪ್ಪಾಗುತ್ತದೆಂದು ನಾನು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಅವರು ಇನ್ನು ಬಂದಿಲ್ಲವಲ್ಲ.

ಶ್ರೀ ಆರ್.ವಿ. ದೇಶಪಾಂಡೆ: ಅವರಿಗೆ ಮೆಸೇಜ್ ಹೋಗುತ್ತದೆ. ಹೀಗಾಗಿ ಇದು mandatory ಇದೆ. ಲಾಸ್ಟ್ ಟೈಂ ನಾನು ರೈಸ್ ಮಾಡಿ ಹೇಳಿದೆ. ಸೆಕ್ಷನ್ 3ರ ಪ್ರಕಾರ ಇದು mandatory ಇದೆ. ಆ ಪ್ರಕಾರ, " The State Government shall in each finanicial year lay before both the Houses of the Legislature a Medium Term Fiscal Plan along with the annual Budget "annual Budget" ನಲ್ಲಿ ಕೊಟ್ಟಿಲ್ಲವೆಂದು ನಾನು ರೈಸ್ ಮಾಡಿದ್ದೇನೆ. ಆಗ Finance Minister ಏನು ಹೇಳಿದರು, ಇಲ್ಲ ಇಲ್ಲ, ನೀವು ಹೇಳುವುದು ನಿಜ. ಕೊಡಬೇಕಾಗಿತ್ತು ಆದರೆ ಪದ್ಧತಿ ಏನು ಇದೆ, discussionಗೆ ಬಂದಾಗ ಕೊಡುತ್ತೇವೆಂದರು, ಇವತ್ತು ಕೊಟ್ಟಿಲ್ಲ. So Budget is bad in law. Budget is unconstitutional ಎಲ್ಲಿಯತನಕ ಒಂದು ವರದಿ ಅವರು ಕೊಡುವುದಿಲ್ಲವೋ ಆ ತನಕ ಈ ರೀತಿ ವ್ಯತ್ಯಾಸ ನೋಡಿ, 2005–2009, ಸಿದ್ದರಾಮಯ್ಯನವರು 2006–2010 ಗೆ ಕೊಟ್ಟಿದ್ದಾರೆ. 2007–2008ಗೆ ನೀವು ಕೊಟ್ಟಿಲ್ಲ. ಕೊಟ್ಟಿಲ್ಲವೆಂದರೆ ಏನಾಗುತ್ತದೆ, ಇಲ್ಲಿ ಡಿಸ್‌ಕಷನ್ ಮಾಡುವುದಕ್ಕೆ ಅವಕಾಶವಾಗುವುದಿಲ್ಲ. ಮೆಂಬರ್ಸ್ ಡಿಷಕಷನ್ ಮಾಡಬೇಕಾದರೆ, Statement of Compliance ನಲ್ಲಿ ನಾನು ಒದುತ್ತೇನೆ. ನೋಡಿ. This 2005-06 Medium Term Fiscal Plan is tabled before the legislature in compliance with Section(3) of the karnataka Fiscal Respnsibility Act, 2002." ಈ ರೀತಿ compliance ಈ ವರ್ಷ ಆಗಿಲ್ಲ. ಇದು mandatory, obligatory, Article 202 of rthe Constitution ಪ್ರಕಾರ Annual Report ಕೊಡುತ್ತೀರಿ. ಇದೇ ಸದನ Fiscal responsibility Act ಪಾಸ್ ಮಾಡಿದ ನಂತರ, it becomes the responsibility of the Government. ಇದು Mandatory ಇದೆ. "Shall" ಎಂದಿದೆ. ಕೊಟ್ಟಿಲ್ಲವೆಂದರೆ, it is unconstitutional Budget. ಏಕೆಂದರೆ, ಮೆಂಬರ್ಸ್ ಡಿಸ್‌ಕಷನ್ ಮಾಡಬೇಕಾದರೆ, ಹಲವಾರು ವಿಚಾರಗಳನ್ನು ಹೇಳ ಬೇಕಾಗುತ್ತದೆ.

Regional imbalance ಆಗಿರಬಹುದು, Receipts and expenditure statement ಸರಿಯಾಗಿದೆಯೋ ಇಲ್ಲವೋ, ಹಾಗಾಗಿ, ಸರ್ಕಾರ, purposely suppress ಮಾಡುವುದಕ್ಕೆ whether you have not given this report. ಈ ರಿಪೋರ್ಟ್ ಕೊಡದೇ ನಾವು ಮುಂದಕ್ಕೆ ಹೋಗುವುದಕ್ಕೆ ಆಗುವುದಿಲ್ಲ. ಹೀಗಾಗಿ ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. Section (3) of the karnataka Fiscal Responsibility Act, ಪ್ರಕಾರ ಈ ತರಹದ mandatory provision comply ಮಾಡಿಲ್ಲ. ಸೆಕ್ಷನ್ 5&6 ಪ್ರಕಾರ transparency ಇರಬೇಕು, 6 ತಿಂಗಳಿಗೊಮ್ಮೆ ರಿವ್ಯೂ ಆಗಬೇಕು, ಆ ರಿವ್ಯೂ ರಿಪೋರ್ಟ್ ಸದನದ ಮುಂದೆ ಇಡಬೇಕು. ಆ ರಿವ್ಯೂ ರಿಪೋರ್ಟ್ ಸದನದ ಮುಂದೆ ಇಲ್ಲ. ಈ ಒಂದು Constitutional, mandatory, legal issue ಅನ್ನು ನಾನು raise ಮಾಡಿದ್ದೇನೆ. ಆದ್ದರಿಂದ, ಮಾನ್ಯ ಉಪ ಮುಖ್ಯಮಂತ್ರಿಗಳು ಅಥವಾ ಮಾನ್ಯ ಕಾನೂನು ಮಂತ್ರಿಗಳು ಇದರ ಬಗ್ಗೆ ಸಮರ್ಪಕವಾದ ಉತ್ತರವನ್ನು ಕೊಡಬೇಕು. ಅವರು ಉತ್ತರ ಕೊಡದಿದ್ದರೆ ನಾವು ಯಾವುದೇ ತರಹ ಚರ್ಚೆ ಮಾಡಿದರೂ ಸಹ ಅದು ವ್ಯರ್ಥವಾಗುತ್ತದೆ. ಏಕೆಂದರೆ, Section 3 of Act requires the M.T.B.B. to include to be tabled all of which can be found by documents below ಈ ರೀತಿಯಾಗಿರಬೇಕಾಗುತ್ತದೆ. The medium term fical objectives of the Government; an evaluation of the performance of the prescribed fiscal indicators in the previous years. ಅಂದರೆ, ಮುಂಚೆ ಪ್ರಗತಿ ಮತ್ತು performance ಏನಾಗಿದೆ ಎನ್ನತಕ್ಕಂಥದು ಇರಬೇಕು. A statement on recent economic trends and prospects for growth and development. ಇದರಲ್ಲಿ ಇದೂ ಸಹ ಇರಬೇಕಾಗುತ್ತದೆ. Strategic priorities and the fiscal policies of the Government and an evaluation of thier consistuency. ಇವತ್ತಿನ ದಿವಸ ರಾಜ್ಯದಲ್ಲಿ ಹಣಕಾಸಿನ ಸ್ಥಿತಿ ಯಾವ ರೀತಿಯಾಗಿದೆ ಎಂದು ಮತ್ತು ಯಾವ ಪ್ರಕಾರ growth ಆಗುತ್ತಿದೆ ಎಂದು ಹಾಗೂ Receipts ಯಾವ ಪ್ರಕಾರ ಎಂಬುದು ಹಾಗೂ ಕಳೆದ ವರ್ಷ ಏನಾಗಿದೆ ಎಂಬುದು ಗೊತ್ತಾಗಬೇಕು. They have given a plan. ಈಗಾಗಲೇ ನಮ್ಮ ಕಡೆ 2010ನೇ ವರ್ಷಗಳವರೆಗೆ ಪ್ಲಾನ್ ಕೊಟ್ಟಿದ್ದಾರೆ. 2006 ಮತ್ತು 2007ನೇ ವರ್ಷದಲ್ಲಿ ಏನಾಯಿತೆಂಬುದರ ಬಗ್ಗೆ ಮತ್ತೆ ಮುಂದೆ ನಾವು ಮಾಡುವ ಪ್ಲಾನ್ ಸರಿಯಾಗುತ್ತದೆಯೊ ಅಥವಾ ಇಲ್ಲವೋ ಎಂಬುದಕ್ಕೋಸ್ಕರ ನೋಡುವುದಕ್ಕಾಗಿ ಈ ಎಲ್ಲಾ ಮಾಹಿತಿಗಳನ್ನು ಕೊಡಬೇಕಾಗುತ್ತದೆ. ಆದರೆ, ಇದುವವರೆಗೂ ಸಹ ಕೊಟ್ಟಿಲ್ಲ.

ಈ ಮಾಹಿತಿಯನ್ನು ಕೊಡತಕ್ಕಂಥದ್ದು mandatory. if it was not mandatory ನಾನು ಪ್ರಸ್ತಾಪ ಮಾಡುತ್ತಿರಲಿಲ್ಲ. ಆದ್ದರಿಂದ, ನಾನು ಪ್ರಸ್ತಾಪ ಮಾಡಿರತಕ್ಕಂಥ ವಿಷಯಕ್ಕೆ ಸಮರ್ಪಕವಾದಂಥ ಉತ್ತರವನ್ನು ಕೊಡಬೇಕು ಆದರೆ, ಇದಕ್ಕೆ ಸಮರ್ಪಕವಾದಂಥ ಉತ್ತರವನ್ನು ಕೊಡುವ ತನಕ ಮುಂಗಡ ಪತ್ರದ ಮೇಲೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದು ನಾನು ತಮ್ಮಲ್ಲಿ ವಿನಯದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಹಣಕಾಸಿನ ಸಚಿವರು ಬಂದು ಹೇಳಲಿ. ಇದನ್ನು ಕೊಟ್ಟಿರಬಹುದೆಂದು ನಾನು ನಿಮ್ಮ ಕಚೇರಿಯಲ್ಲಿ ಪಡೆದುಕೊಳ್ಳುವುದಕ್ಕೆ ನಿನ್ನೆ ದಿವಸದವರೆಗೆ ಟ್ರೈ ಮಾಡಿದೆ. ಆದರೆ, ನನಗೆ ಸಿಗಲಿಲ್ಲ. Medium term fiscal plan ಬೇಕಾಗುತ್ತದೆ. ಮತ್ತೆ 6 months ಒಮ್ಮೆ as per section 5 and 6 ಅವರು ರಿವ್ಯೂ ಮಾಡಬೇಕಾಗುತ್ತದೆ. ಆದ್ದರಿಂದ, ಈ ಎರಡು ವಿಚಾರದ ಬಗ್ಗೆ ಹಣಕಾಸಿನ ಸಚಿವರು ತಿಳಿಸಬೇಕಾಗುತ್ತದೆ. section 5 ಪ್ರಕಾರ the State Government shall take suitable measures to ensure greater transparency in its fiscal opearation in public interest and minimize as for as practicable, secretary in the preparation of the annual budget. ಈ ಪ್ರಕಾರ ಸ್ಟೇಟ್‌ಮೆಂಟ್ ಕೊಡಬೇಕು. Section 6ರ ಪ್ರಕಾರ, The annual budget and policies announced at the time of budget, shall be consistent with objectives and targets specified in the Medium Term Fiscal Plan for the coming and future years. ಆದ್ದರಿಂದ ಇದು ನಮಗೆ ಹೇಗೆ ಗೊತ್ತಾಗಬೇಕು? ನೀವು book ಕೊಡದಿದ್ದರೆ it is in consistence with the budget ಎಂದು ಹೇಗೆ ಗೊತ್ತಾಗಬೇಕು? Sir, political philosophy is different. The Ruling Party may have a political philosophy. Political Philosophy cannot disturb the discipline of finance. Regional imbalances, inconsistency in budget and the medium term fiscal plan, that is not right. ರಾಜಕೀಯವಾಗಿ ವಿಚಾರ ಮತ್ತು ಕಾರ್ಯಕ್ರಮಗಳು ಬೇರೆ ಇರಬಹುದು. Political philosophy cannot override the financial discipline of the State. ಆದ್ದರಿಂದ, The Minister in charge of the Department of Finance, shall review, every half year, the trends in receipts and expenditure in relation to the budget, remedial measures to be taken to achive the budget targets and place before both the Houses of Legislature the out come of such

reviews. The review report shall be in such form as may be prescribed. ರಿವ್ಯೂ ರಿಪೋರ್ಟ್ ಕೊಟ್ಟಿಲ್ಲ ಮತ್ತೆ Fiscal plan ಇಲ್ಲ. ಆದ್ದರಿಂದ, ನಾವು ಹೇಗೆ ಚರ್ಚೆ ಮಾಡಬೇಕು. ಆದ್ದರಿಂದ ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ಈ ಚರ್ಚೆಯನ್ನು ಅಲ್ಲಿಗೆ ನಿಲ್ಲಿಸಿ comply ಮಾಡುವುದಕ್ಕೆ ನೀವು ಅವರಿಗೆ ಹೇಳಿ. ಆನಂತರ ನಾನು ವಿತ್ ಡ್ರಾ ಮಾಡಿಕೊಳ್ಳುತ್ತೇನೆ. ಆಮೇಲೆ ಚರ್ಚೆ ಪ್ರಾರಂಭವಾಗಲಿ. ಒಂದು ವೇಳೆ, ಅವರು ಆದ್ದರಿಂದ, comply ಮಾಡದಿದ್ದರೆ, you have to take consequential steps. Till they give that nothing can be discussed. ಇಲ್ಲದಿದ್ದರೆ ಇದು un constitutional and illegal ಆಗುತ್ತದೆ. ಮತ್ತೆ ನಾವು ಈ trend continue ಮಾಡುವುದಕ್ಕೆ ಹೋಗಬಾರದೆಂದು ಹೇಳುತ್ತೇನೆ. ಇದನ್ನು ನನ್ನ point of order ಎಂದಾದರೂ ತೆಗೆದುಕೊಳ್ಳಿ ಅಥವಾ ಯಾವುದಾದರೂ ತೆಗೆದುಕೊಳ್ಳಿ. ಒಟ್ಟಿನಲ್ಲಿ ಈ ವಿಷಯವನ್ನು ನಾನು ಪ್ರಸ್ತಾಪ ಮಾಡಿದ್ದೇನೆ.

ಅಧ್ಯಕ್ಷರು:– ಉಪ ಮುಖ್ಯಮಂತ್ರಿಗಳು ಬರಲಿ ಕೇಳೋಣ.

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ):– ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ನಾನೂ ಕೂಡ ರೈಸ್ ಮಾಡಬೇಕೆಂದು ಇದ್ದೆ. ಮತ್ತೆ ಬೇರೆ ಯಾರೂ ಕೂಡ ರೈಸ್ ಮಾಡಲಿಲ್ಲ. ಜನರಲ್ ಬಜೆಟ್ ಮೇಲೆ ಚರ್ಚೆ ಮಾಡುವಾಗ ಈ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ಕನಿಷ್ಠ ಪಕ್ಷ ಈಗಲಾದರೂ ಕೂಡ ಅವರು ಕೊಡಬೇಕಾಗುತ್ತದೆ. Fiscal Responsibility Act ಅನ್ನು Constitution Article 202 ಪ್ರಕಾರ ನಾವು ಮಾಡಿರತಕ್ಕಂಥದನ್ನು ಇದೇ ಸದನ ಪಾಸ್ ಮಾಡಿದ್ದೇವೆ. ಈ ಆಕ್ಟ್ ಪ್ರಕಾರ ಸೆಕ್ಷನ್–3ರಲ್ಲಿ ಅದು ಮ್ಯಾಡೆಂಟರಿಯಾಗಿದೆ. ಅಂದರೆ, While presenting the budget Medium Terem Fiscal plan for every year ಬಜೆಟ್ ಜೊತೆ ಅದನ್ನು ಮಂಡಿಸಬೇಕೆಂಬುದು ಮ್ಯಾಡೆಂಟರಿಯಾಗಿದೆ. 'Shall" ಎನ್ನತಕ್ಕಂಥ ಪದವನ್ನು ಉಪಯೋಗಿಸಲಾಗಿದೆ. It is obligtory on the part of the concerned Minister. ಆದರೆ, ಅವರು ಇವತ್ತಿನವರೆಗೆ ಅದನ್ನು ಮಂಡಿಸಿಲ್ಲ. Section-6 of the Fiscal Responsibility Act ಪ್ರಕಾರ 2006–07ರಲ್ಲಿ ಎರಡು ಸಾರಿ ರಿವ್ಯೂ ಮಾಡಬೇಕಾಗಿತ್ತು. ಮತ್ತೆ ರಿವ್ಯೂ ಪೇಪರ್‌ನ್ನು ಸದನದ ಮುಂದೆ ಮಂಡಿಸಬೇಕಾಗಿತ್ತು. ಆದರೆ, ಅದನ್ನು ಮಂಡಿಸಿಲ್ಲ. ಆದ್ದರಿಂದ, ಇದರ ಬಗ್ಗೆ ಕಾನೂನು ಮಾಡಿರುವುದು ಏಕೆ? 2002ನೇ ಇಸವಿಯಲ್ಲಿ Fiscal Responsibility Act ನ್ನು ನಾವು ಪಾಸ್ ಮಾಡಿದ್ದೇವೆ. ಇದನ್ನು ಏಕೆ ಮಾಡಿದ್ದೇವೆಂದರೆ ವಿತ್ತೀಯ

ಸುಧಾರಣೆಗಳನ್ನು 2001–02ರಲ್ಲಿ ಪ್ರಾರಂಭ ಮಾಡಿದ ಮೇಲೆ ಮತ್ತೆ ನಾವು fiscal deficit, revenue deficit ಗೆ ಹೋಗಬಾರದೆಂದು ಮತ್ತು 'U' turn ನ್ನು ಕರ್ನಾಟಕದಲ್ಲಿ ತೆಗೆದುಕೊಳ್ಳಬಾರದೆಂದು ಮತ್ತು ಹಣಕಾಸಿನ ಪರಿಸ್ಥಿತಿಯ ಆರೋಗ್ಯ ಕೆಟ್ಟು ಹೋಗಬಾರದೆಂಬ ಕಾರಣಕ್ಕಾಗಿ ಬಹಳ ಎಚ್ಚರಿಕೆಯಿಂದ ಈ ಎಲ್ಲಾ ಕಾನೂನುಗಳನ್ನು ಇದೇ ಸದನದಲ್ಲಿ ನಾವು ಮಾಡಿದ್ದೇವೆ. Constitution ಪಾಲನೆ ಮಾಡುವುದಿಲ್ಲ, ಇಲ್ಲಿ ಪಾಸ್ ಮಾಡಿರತಕ್ಕಂಥ ಅಕ್ಟ್‌ನ್ನು ಪಾಲನೆ ಮಾಡುವುದಿಲ್ಲವೆಂದರೆ ಹೇಗೆ? ನಾಳೆ ದಿವಸ ನಾನು ಮಾತನಾಡುವಂಥ ಸಂದರ್ಭದಲ್ಲಿ ಈ ಎಲ್ಲ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ದೇಶಪಾಂಡೆಯವರು ಈಗ ಪ್ರಸ್ತಾಪ ಮಾಡಿರತಕ್ಕಂಥ ವಿಚಾರ it is a very valid point. It is a constitutional point, it is a legal point. But, they have not complied with it. ಅದ್ದರಿಂದ, ತಾವು ಅಧ್ಯಕ್ಷರು, you must direct the Government. Otherwise, it is going to be illegal. Unconstitutional ಆಗುತ್ತದೆ. ನಾನು ಹೇಳುವುದೇನೆಂದರೆ, ಬಜೆಟ್ ಪ್ರೆಸೆಂಟ್ ಮಾಡಿದ ಮೇಲೆ ಮತ್ತು ಉತ್ತರ ಕೊಡುವಾಗ ನೂರಾರು ಕಾರ್ಯಕ್ರಮಗಳನ್ನು ಪ್ರಕಟಣೆ ಮಾಡಿ ಅದಕ್ಕೆ ಬಜೆಟ್‌ನಲ್ಲಿ ಹಣ ಇಟ್ಟಿಲ್ಲದೇ ಪ್ರಕಟ ಮಾಡುವುದು, most indisciplined way of presenting the budget. It is Unconstitutional. ಈ ರೀತಿಯಾಗಿ ಅವಕಾಶ ಮಾಡಿಕೊಟ್ಟರೆ ನಾವು ಎಲ್ಲಿಗೆ ಹೋಗಿ ನಿಲ್ಲುತ್ತೇವೆ? ಏಕೆಂದರೆ, ಇಲ್ಲಿ ನಾವು ಕಾನೂನನ್ನು ರಚನೆ ಮಾಡುತ್ತೇವೆ. ಆದ್ದರಿಂದ, ನಾವೇ ಒಪ್ಪಿ ಈ ಸದನದಲ್ಲಿ ಮಾಡಿದಂಥ ಕಾನೂನನ್ನು ನಾವೇ ಪಾಲನೆ ಮಾಡದಿದ್ದರೆ ಕಾನೂನು ಬಗ್ಗೆ Constitution ಬಗ್ಗೆ ಗೌರವ ಎಲ್ಲಿ ಉಳಿಯುತ್ತದೆ? ಹಾಗಾದರೆ, ನಾವುಗಳು ಕಾನೂನು ಮಾಡಿಕೊಂಡಿರತಕ್ಕಂಥದ್ದು ಏಕೆ? ಈ ಕಾನೂನಿನ ಚೌಕಟ್ಟಿನೊಳಗೆ ಕೆಲಸ ಮಾಡಬೇಕಲ್ಲವೇ? ಅದನ್ನು ಹಣಕಾಸಿನ ಮಂತ್ರಿಗಳು ಕೊಟ್ಟಿರಬೇಕು, ಆದರೆ ಅದು ನಮ್ಮ ಕೈಗೆ ಬಂದಿಲ್ಲದೇ ಇರಬೇಕು ಎಂದು ನಾನು ಚಕ್ ಆಪ್ ಮಾಡಿಸಿದೆ. ಆದರೆ, ಪ್ರತಿ ವರ್ಷ ಮಂಡಿಸಬೇಕಾಗಿರತಕ್ಕಂಥ Medium Term Fiscal Plan ಇವತ್ತಿನವರೆಗೆ ಈ ವರ್ಷದನ್ನು ಮಂಡಿಸಿಲ್ಲ. ಮಾನ್ಯ ಪ್ರಕಾಶ್‌ರವರ ಗಮನಕ್ಕೆ ತರುವುದೇನೆಂದರೆ, every year along with the budget Medium Term Fiscal Plan has to be presented, ಆದರೆ, ಈ ವರ್ಷ ಮಂಡಿಸಿಲ್ಲ. Section-6 of the Fiscal Responsibility Act ಪ್ರಕಾರ 6 ತಿಂಗಳಿಗೊಮ್ಮೆ ರಿವ್ಯೂ ಮಾಡಬೇಕು. ನಮ್ಮ ಹಣಕಾಸಿನ ಪರಿಸ್ಥಿತಿ ಹೇಗಿದೆ ಎಂದು ಮತ್ತು ನಮ್ಮ debt service ಯಾವ ರೀತಿಯಾಗಿದೆ ಎಂದು ಮತ್ತು ಟ್ಯಾಕ್ಸ್

ರೇಟ್ ಎಷ್ಟಿದೆ ಎಂದು ಮತ್ತೆ ನಮ್ಮ Expenditure ಎಷ್ಟಿದೆ ಎಂದು ಖಾತ್ರಿಗಳು ಯಾವ ರೀತಿಯಾಗಿದೆ ಎಂದು ಮತ್ತು ಕಾರ್ಯಕ್ರಮಗಳನ್ನು ಯಾವ ರೀತಿಯಾಗಿ ಮಾಡಿದ್ದೇವೆಂದು ಹಾಗೂ ಬಜೆಟ್ ಪ್ರೋಗ್ರಾಮ್‌ಗಳು ಏನಾಗಿವೆ ಎನ್ನತಕ್ಕಂಥವರೆಲ್ಲರ ಬಗ್ಗೆ ನಾವು ರಿವ್ಯೂ ಮಾಡಿ ಅದರ ರಿವ್ಯೂ ಪೇಪರ್‌ನ್ನು ಇಲ್ಲಿಡಬೇಕು. You have both the Houses, ಕಳೆದ ವರ್ಷ ನೀವೇ ಮಾಡಿರುವುದು 6–6 ತಿಂಗಳಿಗೊಮ್ಮೆ ಮಾಡಬೇಕೆಂದು ಇದೆ, ಎರಡನ್ನೂ ಸಹ ಮಾಡಿರುವುದಿಲ್ಲ. ಅದರಿಂದಾಗಿ ಇದು unconstitutional ಆಗುವುದಿಲ್ಲವೆ ಮಾನ್ಯ ಪ್ರಕಾಶ್‌ರವರೆ. Is it not violation of Fiscal Responsibility Act, 2002. It is a clear violation of Sectin 3, Section 6 and also Section (5).

12-30 P.M.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಅಧ್ಯಕ್ಷರೆ, ನಾನು ಈಗ ಹಣಕಾಸಿನ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಹೇಳಿ ಕಳುಹಿಸಿದ್ದೇನೆ.. ಅದು ನಾನು ಈಗ ಗಮನಿಸಿದಂತೆ 2006–10ರಲ್ಲಿ ಬಂದಿರುತ್ತದೆ. 2007ಕ್ಕೆ ಕೊಡಬೇಕಾಗಿತ್ತು. ಅದು ಇಲ್ಲಿ ಸಚಿವಾಲಯದಲ್ಲಿ ಇಲ್ಲ. ಸಚಿವಾಲಯದಲ್ಲಿ ಅದನ್ನು ಹುಡುಕಿಸಿದಾಗ ಅದು ಬಂದಿಲ್ಲವೆಂದು ಹೇಳಿದರು. ಅವರು ಬಂದ ತಕ್ಷಣವೇ ಅಲ್ಲಿಂದ ಉತ್ತರವನ್ನು ತೆಗೆದುಕೊಂಡು ನಾನು ಮಾತನಾಡುತ್ತೇನೆ. ಇದಕ್ಕೆ ಸ್ವಲ್ಪ ಕಾಲಾವಾಕಾಶ ಬೇಕು.

ಶ್ರೀ ಆರ್.ವಿ. ದೇಶಪಾಂಡೆ :– No, ಇದಕ್ಕೆ ಕಾಲಾವಕಾಶವನ್ನು ಬೇಕಾದರೆ ತೆಗೆದುಕೊಳ್ಳಿ, ಈ ಬಗ್ಗೆ discussion ಮಾಡುವುದಕ್ಕಾಗುವುದಿಲ್ಲ. Literally it is an issue. ಏಕೆಂದರೆ, Receipts, Payments, so many factors are there. ತಾವು ಬೇಕಾದರೆ Act ನ್ನು ತೆಗೆದು ಓದಿ ನೋಡಿ. Speaker Act ನ್ನು ತಾವು ಓದಿ ನೋಡಿ, if you are convinced what we are saying is wrong, you allow the discussion. Section 5, Section 3 ನಿಮಗೆ mandatory ಇದೆ. If they are not complied with ಹಳೆಯ ರೆಕಾರ್ಡ್‌ನ್ನು ತೆಗೆದು ನೋಡಿ ಓಂಪ್ರಕಾಶ್‌ರವರೆ, ಬಜೆಟ್‌ನಲ್ಲಿ discussion ಆಗಿರುವುದರಲ್ಲಿ ನಾವು ಈ ಬಗ್ಗೆ ಮಾತನಾಡುವಾಗ Deputy Chief Minister ರವರು ಒಪ್ಪಿಕೊಂಡರು. ಹೌದು, ನಾವು ಕೋಡಬೇಕಾಗಿತ್ತು. ಅದು ನಮ್ಮ ಪದ್ಧತಿ ಏನಿದೆ ಎಂದರೆ Demands for Grants ಬಂದಾಗ ಕೊಡುತ್ತೇನೆ. It is in record. ತಾವು ತೆಗೆದುನೋಡಿ. ಅದು ಸಹ

ಕೊಟ್ಟಿರುವುದಿಲ್ಲ. ಅದನ್ನೂ ಅವರು comply ಮಾಡಿಲ್ಲ.. O.K. ಬಜೆಟ್ ಟೈಮ್‌ನಲ್ಲಿ ಕೊಡಬೇಕೆಂದು ಇದೆ, ಅವರು ಹೇಳಿದ್ದಾರೆ ನೋಡಿ. Deputy C.M. ನನ್ನ ಡಿಬೇಟ್‌ನ್ನು ತೆಗೆದು ನೋಡಿ ಡಿಬೇಟ್‌ಗೆ ಉತ್ತರ ಕೊಡುವಾಗ ಅವರು ಹೇಳಿದ್ದಾರೆ. ನಾವು ಡಿಮ್ಯಾಂಡ್ ಟೈಮ್‌ನಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ. ನಾವು ಬಜೆಟ್‌ನಲ್ಲಿ ಕೊಟ್ಟಿಲ್ಲ, ನಿಜ but the practice is to give it at the time of discussion on demands for Grants. ಕೊಡುತ್ತೇವೆಂದು ಹೇಳಿದ್ದಾರೆ. ತಾವು ಬಜೆಟ್ discussion ನ್ನು ತೆಗೆದು ನೋಡಿ. ತಮ್ಮಲ್ಲಿ ನಾನು ಏನು appeal ಮಾಡಿಕೊಳ್ಳುತ್ತೇನೆಂದರೆ, ನನಗೆ ಚರ್ಚೆಗೆ ಅಡ್ಡಿ ಬರಬೇಕೆಂಬ ಇಚ್ಛೆ ಇಲ್ಲ. ಇವತ್ತು I should be very sorry. ನಾನು ಇದಕ್ಕಿಂತ ಮುಂಚೆಯೇ ಮಾಡಬೇಕಾಗಿತ್ತು. ನಿನ್ನೆ ನಾನು ಇವತ್ತು ಮಾತನಾಡಬೇಕೆಂದು study ಮಾಡುವಾಗ ನನಗೆ ಗೊತ್ತಾಗಿದೆ. In the normal course ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ನಿನ್ನೆ ದಿನ ನಾನು 2–3 ಸಾರಿ ಆಫೀಸಿಗೆ ಜನರನ್ನು ಕಳುಹಿಸಿದ್ದೆ. ಇಲ್ಲಾ ಎಂದಾಗ ನಾನು raise ಮಾಡಿದ್ದೇನೆ. I don't want to come in the way of discussion. ಆದರೆ discussion unconstitutional ಇದ್ದಾಗ, ಸರ್ಕಾರ ಕೆಲವು mandtory provisions comply ಮಾಡದಿದ್ದಾಗ ನಾವು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಎಂ.ಪಿ. ಪ್ರಕಾಶ್ :– ಆ ರೀತಿಯಾಗಿ ಹಣಕಾಸಿನ ಸಚಿವರು ಹೇಳಿರುವಂತಹದ್ದು ಈಗಾಗಲೇ ದಾಖಲೆಯಲ್ಲಿ ಇದೆ ಎಂದು ಹೇಳಿದ್ದಾರೆ. ಅದರ ಜೊತೆಗೆ Medium Term Fiscal Plan to be laid before the legislature "Shall" ಎಂಬ ಪದವನ್ನು ಉಪಯೋಗಿಸಿದ್ದಾರೆ. ಆದ್ದರಿಂದ ಅವರು ಬರುವವರೆಗೂ ಕೂಡ ಸ್ವಲ್ಪ ಕಾಲಾವಕಾಶವನ್ನು ಕಲ್ಪಿಸಿಕೊಡಬೇಕು. ಈಗ ಅವರು ಬೇರೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಿ. ವಿತ್ತೀಯ ವಿಚಾರಗಳು ಇಲ್ಲದೆಯೇ ನಾವು ಚರ್ಚೆ ಮಾಡುವುದಕ್ಕೆ ಕಷ್ಟವಾಗುತ್ತದೆ ಎಂದು ಅವರು ಹೇಳುವ ಹಾಗಿದ್ದರೆ ಅದರ ಸತ್ಯ ಸಂಗತಿಯನ್ನು ತಿಳಿದುಕೊಂಡು ನಾನು ಮಾತನಾಡುತ್ತೇನೆ. ಅದರ ಜೊತೆಗೆ ಬೇರೆ ಇವತ್ತಿನ ಕಾರ್ಯಕಲಾಪಗಳಲ್ಲಿ ಚುನಾವಣೆಯ ವಿಚಾರದಲ್ಲಿ ನಾನು ಹೇಳಬೇಕಾಗಿರುವುದು ಇದೆ. ಇದರ ಬಗ್ಗೆ ಬೇರೆಯವರು ಮಾಡಿ. ಹಾಗಾದರೆ ಬೇರೆ ಠರಾವುಗಳನ್ನು ತೆಗೆದುಕೊಳ್ಳೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಚುನಾವಣೆಗೆ ಸಂಬಂಧಿಸಿದಂತೆ ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ಕೊಟ್ಟುಬಿಡೋಣ. ಅವರು place ಮಾಡಲಿ.

ಶ್ರೀ ಎಂ.ಪಿ. ಪ್ರಕಾಶ್ :– ಆಯಿತು. Thank you sir. ಏಕೆಂದರೆ ಅದೇ ಸಂಪ್ರದಾಯವಾಗಿದೆ. ಯಾವಾಗಲೂ ಕೂಡ ಹಾಗೆಯೇ ಮಾಡುತ್ತಿದ್ದೆವು. ಬೇರೆ ಕಲಾಪಗಳನ್ನು ತೆಗೆದುಕೊಳ್ಳಬಹುದಲ್ಲವೇ?

ಅಧ್ಯಕ್ಷರು :– ಈಗ ಗಮನ ಸೆಳೆಯುವ ಸೂಚನೆಗಳು. ಮಾನ್ಯ ಶ್ರೀನಿವಾಸಗೌಡರದು.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) :– ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲಿ ಅಥವಾ ಸಂಬಂಧಪಟ್ಟ ಮಂತ್ರಿಗಳು ಕೂಡ ಯಾರು ಇಲ್ಲ.

ಅಧ್ಯಕ್ಷರು :– ಏನಾಗಿದೆ ಎಂದರೆ, ಅವರು ಎಲ್ಲೋ ಹೋಗಿದ್ದಾರೆ. ಆ ಮನೆಗೆ ಹೋಗಿರಬಹುದು.

ಶ್ರೀ ಕೆ. ಶ್ರೀನಿವಾಸಗೌಡ :– ಗಮನವನ್ನು ಸೆಳೆಯುವುದಕ್ಕೆ ಅ ಮಂತ್ರಿಗಳು ಇಲ್ಲವಲ್ಲಾ.

ಅಧ್ಯಕ್ಷರು :– ಇದರ ಮೇಲೆ ಚರ್ಚೆ ನಡಯಬೇಕಾಗಿತ್ತು. ಬಹುಶಃ ಅದು ಕೊನೆಯಲ್ಲಿ ಬರುತ್ತದೆಂದು ಅವರು ಹೋಗಿದ್ದಾರೆ. ಆ ಮನೆಯಲ್ಲಿ ಇರಬಹುದು. ಆದ್ದರಿಂದ ತಾವು ಮಾತನಾಡಿ.

ಶ್ರೀ ಕೆ. ಶ್ರೀನಿವಾಸಗೌಡ :– ಆಯಿತು. ಅಧ್ಯಕ್ಷರೆ, ಹಾಗಾದರೆ ನಾನು ಮಾತನಾಡುತ್ತೇನೆ.

7. ಗಮನ ಸೆಳೆಯುವ ಸೂಚನೆ

ವಿಷಯ : ಕೋಲಾರ ಜಿಲ್ಲೆಯಲ್ಲಿನ ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆಗೆ ಹಣ ಮಂಜೂರಾತಿ ಕುರಿತು.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) :– ಮಾನ್ಯ ಅಧ್ಯಕ್ಷರೆ, ಕೋಲಾರ, ಬಂಗಾರಪೇಟೆ ಮತ್ತು ಮಾಲೂರು ಪಟ್ಟಣಗಳಿಗೆ ಕುಡಿಯುವ ನೀರಿಗೆ ಯರಗೋಳ್ ಎಂಬ ಜಾಗದಲ್ಲಿ ಒಂದು ಡ್ಯಾಂನ್ನು ಕಟ್ಟಿ ನೀರು ಕೊಡುವ ಬಗ್ಗೆ ಬಜೆಟ್‌ನಲ್ಲಿ 50 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಈಗಾಗಲೇ ಕೇಂದ್ರ ಸರ್ಕಾರದಿಂದ 79.79 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಆದರೆ ಡ್ಯಾಂನ್ನು ಕಟ್ಟುವುದಕ್ಕೆ 160 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ವರ್ಷದ ಬಜೆಟ್‌ನಲ್ಲಿ 50 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಅದನ್ನು ಇವತ್ತಿಗೂ ಕೂಡ ಈ ಬಗ್ಗೆ ಕೇಂದ್ರ ಸರ್ಕಾರದಿಂದ ಹಣ ಆಗಲೇ ಬಂದು ನಮ್ಮ ರಾಜ್ಯ ಸರ್ಕಾರದ ಖಜಾನೆಯಲ್ಲಿದೆ. ಆದರೆ ಇಲ್ಲಿ 160 ಕೋಟಿ ರೂಪಾಯಿಗಳ ಅಪ್ರೂವಲ್‌ಗೆ ಏನು ಮಾಡಬೇಕಾಗಿತ್ತು, ಆ ಬಗ್ಗೆ ಇನ್ನು ಫೈಲ್ ಬೆಳಗಿನಿಂದ ಸಾಯಂಕಾಲದವರೆಗೆ ಓಡಾಡುವ